ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ        ದಿನಾಂಕ : DATE : 19/12/20

---

### ಸಭಾಪತಿ ಪಕ್ಕ ಕೂರಲು ಮತ್ತೊಂದು ಕುರ್ಚಿ ಸಜ್ಜು ಮಾಡಿದ್ದ ಡಿಪಿಎಆರ್ ಸಿಬ್ಬಂದಿ

# ಕುರ್ಚಿ ಪಕ್ಕ ಕುರ್ಚಿಗೆ ತಯಾರಿ!

19/12/20

**ವಿಶ್ವವಾಣಿ ವಿಶೇಷ**

**ಬೆಂಗಳೂರು:** ಸಭಾಪತಿ ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಯ ದಿನ ನಡೆದ ಗದ್ದಲ ದಿನಕ್ಕೊಂದು ತಿರುವು ಪಡೆದುಕೊಳ್ಳುತ್ತಿದ್ದು, ಅಂದು ಸಭಾಪತಿಗಳ ಪಕ್ಕ ಮತ್ತೊಂದು ಕುರ್ಚಿ ಹಾಕಲು ಸಿದ್ಧತೆ ನಡೆದಿತ್ತು ಎನ್ನಲಾಗಿದೆ.

ಡಿ.15ರಂದು ನಡೆದ ವಿಧಾನ ಪರಿಷತ್ ಕಾರ್ಯಕಲಾಪದಲ್ಲಿ ಸಭಾಪತಿಗಳ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿ, ಅವರನ್ನು ಕೆಳಕ್ಕೆ ಇಳಿಸಬೇಕು ಎಂದು ಬಿಜೆಪಿಯ ಪರಿಷತ್ ಸದಸ್ಯರು ಸಜ್ಜಾಗಿದ್ದರು. ಇದಕ್ಕೆ ಸರಕಾರದ ಸಂಪೂರ್ಣ ಬೆಂಬಲವೂ ಇತ್ತು. ಆದ್ದರಿಂದ ಸಭಾಪತಿ ಪ್ರತಾಪ್‌ಚಂದ್ರ ಶೆಟ್ಟಿ ಅವರು ಅವಿಶ್ವಾಸ ನಿರ್ಣಯದ ಮೇಲೆ ರೂಲಿಂಗ್ ಕೊಡದಿದ್ದರೆ, ಸಭಾಪತಿ ಸ್ಥಾನದ ಪಕ್ಕ ಇನ್ನೊಂದು ಕುರ್ಚಿ ಹಾಕಿಸಿ, ಅಲ್ಲಿ ಉಪಸಭಾಪತಿಗಳನ್ನು ಕೂರಿಸಿ, ರೂಲಿಂಗ್ ಕೊಡಿಸುವ ಲೆಕ್ಕಾಚಾರ ಬಿಜೆಪಿಗೆ ಇತ್ತು ಎನ್ನುವ ಅಚ್ಚರಿಯ ಮಾಹಿತಿ ಹೊರಬಿದ್ದಿದೆ.

ಈ ಸಂಬಂಧ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ಸ್ಪಷ್ಟ ಸೂಚನೆ ರವಾನೆಯಾಗಿತ್ತು. ಆದ್ದರಿಂದ ಇದಕ್ಕೆ ಬೇಕಿರುವ ತಯಾರಿಯನ್ನೂ ಇಲಾಖೆ ಸಿಬ್ಬಂದಿ ಮಾಡಿಕೊಂಡಿದ್ದರು. ಆದರೆ ಅಂತಿಮ ಕ್ಷಣದಲ್ಲಿ ಈ ರೀತಿ ಪ್ರತ್ಯೇಕ ಕುರ್ಚಿ ಹಾಕಿದಾಗಲೂ, ಉಪಸಭಾಪತಿಗಳಿಂದ ರೂಲಿಂಗ್ ಕೊಡಿಸುವುದು ಕಷ್ಟ ಎನ್ನುವುದನ್ನು ಅರಿತು, ಸಭಾಪತಿ ಪ್ರತಾಪ್‌ಚಂದ್ರ ಶೆಟ್ಟಿ ಅವರು ಬರುವ ಮೊದಲೇ, ಸಭಾಪತಿಗಳ ಕುರ್ಚಿಯಲ್ಲೇ ಧರ್ಮೇಗೌಡ ಅವರನ್ನು ಕೂರಿಸಲು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಮಾಧುಸ್ವಾಮಿ ನಿರ್ಧರಿಸಿದ್ದರು ಎಂದು ಮೂಲಗಳು ತಿಳಿಸಿವೆ.

**ಕುರ್ಚಿ ಎಲ್ಲಿತ್ತು?:** ಸಾಮಾನ್ಯವಾಗಿ ಜಂಟಿ ಸದನವನ್ನು ಉದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡುವಾಗ ಉಭಯ ಸದನಗಳ ಸಭಾಪತಿಗಳನ್ನು ಕೂರಿಸುವುದಕ್ಕಾಗಿ ಎರಡು ಪ್ರತ್ಯೇಕ ಕುರ್ಚಿಗಳು ಸದನದ ಸಭಾಂಗಣದಲ್ಲಿರುತ್ತವೆ. ಇದರಲ್ಲಿಯ ಒಂದು ಕುರ್ಚಿಯನ್ನು ಹಾಕಲು ಯೋಜನೆ ರೂಪಿಸಲಾಗಿತ್ತು. ಅಲ್ಲದೇ, ಕುರ್ಚಿಯ ಧೂಳನ್ನು ಹೊಡೆದು ಸಿದ್ಧಪಡಿಸಲಾಗಿತ್ತು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಆದರೆ ಅಂತಿಮ ಕ್ಷಣದಲ್ಲಿ ಈ ಯೋಜನೆಯನ್ನು ಬಿಜೆಪಿ ಬಿಟ್ಟಿದ್ದರಿಂದ, ಸಭಾಪತಿ ಕುರ್ಚಿಯ ಮೇಲೆ ಉಪಸಭಾಪತಿ ಅವರನ್ನು ಕೂರಿಸಲಾಯಿತು ಎಂದು ಮೂಲಗಳು ತಿಳಿಸಿವೆ.



## ಜವಾಬ್ದಾರಿ ಹಂಚಿಕೆ ಹೇಗೆ?

**ಪ್ಲ್ಯಾನ್ 1:** ಸಭಾಪತಿ ಒಳಬರುವ ಬಾಗಿಲು ಮುಚ್ಚುವ ಯೋಜನೆ ಹಾಕಿದ್ದು ಡಿಸಿಎಂ ಅಶ್ವತ್ಥ್ ನಾರಾಯಣ. ಆ ಜವಾಬ್ದಾರಿಯನ್ನು ಅರುಣ್ ಶಹಾಪುರ ಮತ್ತು ಪ್ರಾಣೇಶ್ ಅವರಿಗೆ ವಹಿಸಲಾಗಿತ್ತು.

**ಪ್ಲ್ಯಾನ್ 2:** ಒಂದು ವೇಳೆ ಸಭಾಪತಿ ಸದನದೊಳಗೆ ಬಂದರೆ ಕೂಡಲೇ ಹೆಚ್ಚುವರಿ ಕುರ್ಚಿಯನ್ನು ಸಭಾಪತಿ ಕುರ್ಚಿ ಪಕ್ಕ ಹಾಕುವ ಯೋಜನೆಯನ್ನು ರವಿಕುಮಾರ್ ಹಾಕಿದ್ದರು. ಆ ಜವಾಬ್ದಾರಿ ನಾರಾಯಣಸ್ವಾಮಿ ಅವರಿಗೆ ವಹಿಸಲಾಗಿತ್ತು.

## ಕಾರ್ಯದರ್ಶಿ ಮಹಾಲಕ್ಷ್ಮೀಗೆ ಶೋಕಾಸ್ ನೋಟಿಸ್

ವಿಧಾನ ಪರಿಷತ್‌ನಲ್ಲಿ ನಡೆದ ಘಟನೆ ಸಂಬಂಧ ಸಭಾಪತಿ ಪ್ರತಾಪ್‌ಚಂದ್ರ ಶೆಟ್ಟಿ ಅವರು ಪರಿಷತ್ ಕಾರ್ಯದರ್ಶಿ ಕೆ.ಆರ್.ಮಹಾಲಕ್ಷ್ಮೀ ಅವರಿಗೆ ಶೋಕಾಸ್ ನೋಟಿಸ್ ಜಾರಿಗೊಳಿಸಿದ್ದು, ಪತ್ರ ತಲುಪಿದ 48 ಗಂಟೆಯೊಳಗೆ ಅಗತ್ಯ ದಾಖಲೆಗಳೊಂದಿಗೆ ವಿವರಣೆ ಸಲ್ಲಿಸುವಂತೆ ಸೂಚಿಸಿದ್ದಾರೆ.


ಪ್ರತಾಪ್‌ಚಂದ್ರ ಶೆಟ್ಟಿ


ಕೆ.ಆರ್.ಮಹಾಲಕ್ಷ್ಮೀ

'ಡಿ.15ರಂದು ಬೆಳಗ್ಗೆ ವಿಧಾನ ಪರಿಷತ್ ಸದನದಲ್ಲಿ ನಡೆದ ಅಹಿತಕರ ಘಟನೆ ಸಂಬಂಧ ಆಡಳಿತ ಪಕ್ಷದ ಸದಸ್ಯರು ಸಭಾಪತಿಯಾದ ತಮ್ಮ ಸದನ ಪ್ರವೇಶಕ್ಕೆ ನಿರ್ಬಂಧ ವಿಧಿಸಿರುವುದು ಸೇರಿದಂತೆ ಸದನದ ಕಾರ್ಯಕಲಾಪಗಳಿಗೆ ವ್ಯತಿರಿಕ್ತವಾಗಿ ನಿಯಮಾವಳಿಗಳನ್ನು ಗಾಳಿಗೆ ತೂರಿ ನಡೆದುಕೊಂಡ ಘಟನೆಗಳು ವಿವಿಧ ಸಮೂಹ ಮಾಧ್ಯಮಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ವ್ಯಾಪಕವಾಗಿ ಟೀಕೆಗೆ ಒಳಗಾಗಿದೆ. ಇದರಿಂದ ಶತಮಾನದ ಇತಿಹಾಸವುಳ್ಳ ವಿಧಾನ ಪರಿಷತ್ತಿನ ಗೌರವ, ಸಂಪ್ರದಾಯ ಹಾಗೂ ಪರಂಪರೆಗೆ ಧಕ್ಕೆಯಾಗಿದೆ. ಸದನದ ಕಾರ್ಯಕಲಾಪದ ಆಡಳಿತ ಜವಾಬ್ದಾರಿ ವಹಿಸಿದ್ದ ಕಾರ್ಯದರ್ಶಿಗಳು ಕೋರಂ ಬೆಲ್ ಚಾಲನೆಯಲ್ಲಿದ್ದಾಗ್ಯೂ ನಿಯಮ ಬಾಹಿರವಾಗಿ ಉಪ ಸಭಾಪತಿಯವರು ಸಭಾಪತಿಯವರ ಪೀಠ ಅಲಂಕರಿಸಿರುವುದು, ಸಭಾಪತಿಯವರು ಸದನ ಪ್ರವೇಶಿಸುವ ದ್ವಾರವನ್ನು ಮುಚ್ಚಿ ನಿರ್ಬಂಧಿಸಿರುವುದು ತಪ್ಪು' ಎಂದು ನೋಟಿಸ್‌ನಲ್ಲಿ ಉಲ್ಲೇಖಿಸಿದ್ದಾರೆ.